## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:ಕೋವಿಡ್-19 ಸೋಂಕಿನ ಹಿನ್ನಲೆಯಲ್ಲಿ ರಾಜ್ಯದಲ್ಲಿ ಲಾಕ್‌ಡೌನ್ ಘೋಷಿಸಲಾಗಿದ್ದು ಹಾಲು ಒಕ್ಕೂಟಗಳಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗುತ್ತಿರುವ ಹಾಲನ್ನು ಉಚಿತವಾಗಿ ವಿತರಿಸುವ ಬಗ್ಗೆ.**

ಓದಲಾಗಿದೆ: 1) ದಿನಾಂಕ:01-04-2020 ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಗಳು.

2) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 49 ಕಹಾಮ 2018, ದಿನಾಂಕ: 09.10.2018.

3) ವ್ಯವಸ್ಥಾಪಕ ನಿರ್ದೇಶಕರು, ಹಾಸನ ಸಹಕಾರಿ ಹಾಲು ಒಕ್ಕೂಟ ಇವರ ಪತ್ರ ಸಂಖ್ಯೆ:ಹಾಸಹೋ/ವ್ಯ.ನಿ./ಆವಿ/2019-20/8094, ದಿನಾಂಕ:30.03.2020

4) ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕ ಕಡತ ಸಂಖ್ಯೆ: ಆಪಸಂ/ಹೈಸು/ಪ್ರೋ.ಧನ/ವಿವ-01/2020-21.

ಪ್ರಸ್ತಾವನೆ:

ಕೋವಿಡ್-19 ಸೋಂಕಿನ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ದಿನಾಂಕ:24-03-2020 ರಿಂದ ದಿನಾಂಕ 14-04-2020 ರವರೆಗೆ ಲಾಕ್‌ಡೌನ್ ಆದೇಶಿಸಲಾಗಿದ್ದು, 14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಪ್ರತಿದಿನ ಸುಮಾರು 8.84ಲಕ್ಷ ಲೀಟರ್‌ಗಳಷ್ಟು ಹಾಲು ಹೆಚ್ಚುವರಿಯಾಗಿ ಸಂಗ್ರಹವಾಗುತ್ತಿದೆ. ಈ ಹಾಲನ್ನು ಆಯಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿರುವ ನಿರಾಶ್ರಿತರು, ಕೊಳಚೆ ಪ್ರದೇಶ ನಿವಾಸಿಗಳು, ಮತ್ತು ಕೂಲಿ ಕಾರ್ಮಿಕರ ಕುಟುಂಬವೊಂದಕ್ಕೆ ಪ್ರತಿ ದಿನ ಒಂದು ಲೀಟರ್‌ನಂತೆ ಉಚಿತವಾಗಿ ವಿತರಿಸಿ ಪೌಷ್ಠಿಕ ಆಹಾರ ನೀಡುವ ಮೂಲಕ ಆಹಾರ ಭದ್ರತೆ ಒದಗಿಸಲು ಮೇಲೆ (1) ರಲ್ಲಿ ಓದಲಾದ ದಿನಾಂಕ: 01.04.2020ರಂದು ನಡೆದ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ:09.10.2018 ರ ಆದೇಶದಲ್ಲಿ ಹಾಸನ ಸಹಕಾರಿ ಹಾಲು ಒಕ್ಕೂಟಕ್ಕೆ ಮೂಲಭೂತ ಸೌಕರ್ಯಗಳಿಗಾಗಿ ರೂ. 25.00ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ದಿನಾಂಕ: 30.03.2020 ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಹಾಸನ ಸಹಕಾರಿ ಹಾಲು ಒಕ್ಕೂಟವು ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಬಿಡುಗಡೆ ಮಾಡಿರುವ ರೂ. 25.00 ಕೋಟಿಗಳ ಅನುದಾನವನ್ನು ಕರ್ನಾಟಕ ಹಾಲು ಮಹಾಮಂಡಳಿ, ಬೆಂಗಳೂರು ಇವರಿಗೆ ಹಿಂತಿರುಗಿಸಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ಏಕಕಡತದಲ್ಲಿ ಆಯುಕ್ತರು,ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಹಾಸನ ಜಿಲ್ಲಾ ಹಾಲು ಒಕ್ಕೂಟಕ್ಕೆ ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆಯಾಗಿದ್ದ ರೂ. 25.00ಕೋಟಿ ಅನುದಾನವನ್ನು ಒಕ್ಕೂಟವು ಹಿಂತಿರುಗಿಸಿದ್ದು, ಉಳಿದ ರೂ. 13.19 ಕೋಟಿಗಳನ್ನು ಸರ್ಕಾರದಿಂದ ಭರಿಸಬೇಕಾಗುತ್ತದೆ ಎಂದು ಮತ್ತು ರೂ.13.19 ಕೋಟಿಗಳ ವೆಚ್ಚವನ್ನು 2020-21ನೇ ಸಾಲಿನ ಇಲಾಖೆಯ ಲೆಕ್ಕಶೀರ್ಷಿಕೆ:2404-00-191-1-17 ಉ.ಶೀ:100 ಸಹಾಯಧನ ಅಡಿಯಲ್ಲಿ ನೀಡಬಹುದಾಗಿದೆ ಎಂದು ಕೋರಿರುತ್ತಾರೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 49 ಕಹಾಮ 2018,**
**ಬೆಂಗಳೂರು, ದಿನಾಂಕ:02.04.2020.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ 14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಪ್ರತಿದಿನ ಹೆಚ್ಚುವರಿಯಾಗಿ ಸಂಗ್ರಹವಾಗುತ್ತಿರುವ ಸುಮಾರು 8.84 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಆಯಾ ಹಾಲು ಒಕ್ಕೂಟಗಳ ವ್ಯಾಪ್ತಿಯ ಅಧಿಸೂಚಿತ ಕೊಳಗೇರಿಗಳು, ಅಧಿಸೂಚಿತವಲ್ಲದ ಗುರುತಿಸಲ್ಪಟ್ಟ ಕೊಳಗೇರಿಗಳು, ಕಟ್ಟಡಗಳ ಕಾರ್ಮಿಕರ ವಸತಿ ತಾಣಗಳು ಮತ್ತು ವಲಸಿಗ ಕಾರ್ಮಿಕರಿಗಾಗಿ, ಸರ್ಕಾರದವತಿಯಿಂದ ಪ್ರಾರಂಭಿಸಲ್ಪಟ್ಟಿರುವ ತಾತ್ಕಾಲಿಕ ಪುನರ್ವಸತಿ ಶಿಬಿರಗಳ ನಿವಾಸಿಗಳಿಗೆ ಕುಟುಂಬವೊಂದಕ್ಕೆ ಪ್ರತಿ ದಿನ ತಲಾ ಒಂದು ಲೀಟರ್‌ನಂತೆ ಉಚಿತವಾಗಿ ದಿನಾಂಕ: 14.04.2020 ರವರೆಗೆ ವಿತರಿಸಲು ಬಿ.ಬಿ.ಎಂ.ಪಿ., ಮಹಾನಗರ ಪಾಲಿಕೆಗಳು ಮತ್ತು ಜಿಲ್ಲಾಡಳಿತ ಅಗತ್ಯವಾದ ಕ್ರಮ ವಹಿಸುವುದು.

ಜಿಲ್ಲಾ ಹಾಲು ಒಕ್ಕೂಟದ ಹಾಲು ಸಂಸ್ಕರಣೆ ಮತ್ತು ಪ್ಯಾಕಿಂಗ್ ಕೇಂದ್ರಗಳು, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಮಾಜಕಲ್ಯಾಣ ಇಲಾಖೆ ಹಾಗೂ ಸಂಯೋಜನಾಧಿಕಾರಿಗಳು, ಆಹಾರ ಮತ್ತು ಇತರೆ ಸರಬರಾಜು ಸಮಿತಿ, ಬಿಬಿಎಂಪಿ, ಕೋವಿಡ್-19 ಹಾಗೂ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಹಾಲಿನ ವಿತರಣೆಗೆ ಸೂಕ್ತವೆಂದು ಗುರುತಿಸಿದ ಸ್ಥಳಗಳಿಗೆ ಪ್ರತಿದಿನ ಬೆಳಿಗ್ಗೆ 8.00 ಘಂಟೆಯೊಳಗಾಗಿ ಅನುಬಂಧದಲ್ಲಿ ತಿಳಿಸಿರುವ ಪ್ರಮಾಣದಲ್ಲಿ ಹಾಲನ್ನು ಸರಬರಾಜು ಮಾಡುವುದು.

ಹಾಲು ಬೇಗ ಕೆಡುವ ಪದಾರ್ಥವಾದ ಕಾರಣ ಸರಬರಾಜಾದ ಒಂದು ಘಂಟೆಯೊಳಗಾಗಿ ಬಿ.ಬಿ.ಎಂ.ಪಿ., ಮಹಾನಗರ ಪಾಲಿಕೆ, ನಗರ ಸಭೆ ಇತ್ಯಾದಿ ಸ್ಥಳೀಯ ಸಂಸ್ಥೆಗಳ ಗುರುತಿಸಿದ ಸ್ಥಳಗಳ ನಿವಾಸಿಗಳಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಯೋಜನಾಧಿಕಾರಿಗಳು, ಆಹಾರ ಮತ್ತು ಇತರೆ ಸರಬರಾಜು ಸಮಿತಿ, ಬಿಬಿಎಂಪಿ, ಕೋವಿಡ್-19 ಇವರ

ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಯನ್ನು ರಚಿಸಿಕೊಂಡು ಹಾಗೂ ಜಿಲ್ಲೆಗಳಲ್ಲಿರುವ ಮಹಾನಗರ ಪಾಲಿಕೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ಹಾಲು ವಿತರಿಸುವ ವ್ಯವಸ್ಥೆಯನ್ನು ಮಾಡುವುದು. (ಸಮಿತಿಯ ವಿವರ ಅನುಬಂಧದಲ್ಲಿ ಲಗತ್ತಿಸಿದೆ). ಪ್ರತಿದಿನ ಸರಬರಾಜು ಮಾಡಲಾದ ಹಾಲಿನ ಪ್ರಮಾಣದ ಬಗ್ಗೆ ಆಯಾ ಹಾಲು ಒಕ್ಕೂಟಗಳು ಸೂಕ್ತ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು. ಹೀಗೆ ವಿತರಿಸಿದ ಹಾಲಿನ ಬಾಬ್ತನ್ನು ಪ್ರತಿ ಲೀಟರಿಗೆ ರೂ.36.00 ರಂತೆ ಸರ್ಕಾರದಿಂದ ಆಯಾ ಜಿಲ್ಲಾ ಹಾಲು ಒಕ್ಕೂಟಗಳಿಗೆ ಭರಿಸಲಾಗುವುದು.

ಹಾಸನ ಜಿಲ್ಲಾ ಹಾಲು ಒಕ್ಕೂಟಕ್ಕೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 49 ಕಹಾಮ 2018, ದಿನಾಂಕ: 09.10.2018 ರಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆಯಾಗಿದ್ದ ರೂ. 25.00ಕೋಟಿ ಅನುದಾನವನ್ನು ಈ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಉಳಿದ ರೂ. 13.19ಕೋಟಿಗಳ ಅನುದಾನ ಬಿಡುಗಡೆಗೆ ಆಯುಕ್ತರು, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಸಿಎಸ್.ಎಫ್ ಡಿ. ನಂ. 1123 ದಿನಾಂಕ:02.04.2020 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಹನುಮಂತೇಗೌಡ 02/04/2020
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ.
ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶು ಸಂಗೋಪನೆ)

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದು.

ಪ್ರತಿ:

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು

6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ
7) ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ.
8) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಸೂಕ್ತ ಕ್ರಮಕ್ಕಾಗಿ
9) ಸರ್ಕಾರದ ಕಾರ್ಯದರ್ಶಿಗಳು, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಹಾಗೂ ನೋಡಲ್ ಅಧಿಕಾರಿಗಳು, ಅಗತ್ಯ ವಸ್ತುಗಳ ಸರಬರಾಜು
10) ಅಧ್ಯಕ್ಷರು, ಕರ್ನಾಟಕ ಹಾಲು ಮಹಾಮಂಡಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ
11) ಆಯುಕ್ತರು, ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳು, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
12) ನಿರ್ದೇಶಕರು, ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳು, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
13) ಎಲ್ಲಾ ಜಿಲ್ಲಾಧಿಕಾರಿಗಳು – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
14) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ – ಸೂಕ್ತ ಕ್ರಮಕ್ಕಾಗಿ
15) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
16) ವ್ಯವಸ್ಥಾಪಕ ನಿರ್ದೇಶಕರು, 14 ಜಿಲ್ಲಾ ಹಾಲು ಒಕ್ಕೂಟಗಳು ಇವರಿಗೆ ಕಳುಹಿಸುತ್ತಾ ವಿಳಂಬ ಮಾಡದೇ ಕೂಡಲೇ ಬಿಬಿಎಂಪಿ / ಮಹಾನಗರ ಪಾಲಿಕೆ ಆಯುಕ್ತರು / ಜಿಲ್ಲಾಧಿಕಾರಿಗಳನ್ನು ಖುದ್ದು ಭೇಟಿ ಮಾಡಿ ಹೆಚ್ಚುವರಿ ಹಾಲಿನ ಸರಬರಾಜು ಮತ್ತು ವಿತರಣೆಗೆ ಆದೇಶದಂತೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡು ವರದಿ ಸಲ್ಲಿಸಲು ತಿಳಿಸಿದೆ.
17) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-I

ಪ್ರತಿ ದಿನ ಒಕ್ಕೂಟವಾರು ಸರಬರಾಜು ಮಾಡಬೇಕಾಗಿರುವ
ಅಂದಾಜು ಹಾಲಿನ ಪ್ರಮಾಣದ ವಿವರಗಳು

| ಕ್ರ.ಸಂ | ಜಿಲ್ಲಾ ಹಾಲು ಒಕ್ಕೂಟಗಳ ಹೆಸರು | ಹಾಲು ಸರಬರಾಜು ಮಾಡುವ ಜಿಲ್ಲೆಯ ಹೆಸರು | ಹಾಲು ಸರಬರಾಜು ಮಾಡುವ ಅಂದಾಜು ಪ್ರಮಾಣ (ಲಕ್ಷ ಲೀಟರ್‌ಗಳಲ್ಲಿ) |
|---|---|---|---|
| 1 | ಬೆಂಗಳೂರು | ಬೆಂಗಳೂರು ನಗರ | 1.60 |
| | | ಬೆಂಗಳೂರು ಗ್ರಾಮಾಂತರ | |
| 2 | ಕೋಲಾರ | ಕೋಲಾರ | 0.10 |
| | | ಚಿಕ್ಕಬಳ್ಳಾಪುರ | 0.15 |
| | | ಬೆಂಗಳೂರು ನಗರ | 0.80 |
| 3 | ತುಮಕೂರು | ತುಮಕೂರು | 0.25 |
| | | ಬೆಂಗಳೂರು ನಗರ | 0.80 |
| 4 | ಮಂಡ್ಯ | ಮಂಡ್ಯ | 0.10 |
| | | ಬೆಂಗಳೂರು ನಗರ | 0.70 |
| | | ರಾಮನಗರ | 0.10 |
| 5 | ಮೈಸೂರು | ಮೈಸೂರು | 0.30 |
| 6 | ಚಾಮರಾಜನಗರ | ಚಾಮರಾಜನಗರ | 0.10 |
| 7 | ಶಿವಮೊಗ್ಗ | ಶಿವಮೊಗ್ಗ | 0.30 |
| | | ದಾವಣಗೆರೆ | 0.20 |
| | | ಚಿತ್ರದುರ್ಗ | 0.20 |
| 8 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | 0.05 |
| | | ಉಡುಪಿ | 0.05 |
| 9 | ಧಾರವಾಡ | ಧಾರವಾಡ | 0.25 |
| | | ಹಾವೇರಿ | 0.05 |
| | | ಉತ್ತರಕನ್ನಡ | 0.05 |
| | | ಗದಗ | 0.05 |
| 10 | ಬೆಳಗಾವಿ | ಬೆಳಗಾವಿ | 0.50 |
| 11 | ವಿಜಯಪುರ | ವಿಜಯಪುರ | 0.39 |
| | | ಬಾಗಲಕೋಟೆ | 0.25 |
| 12 | ಕಲಬುರ್ಗಿ | ಕಲಬುರ್ಗಿ | 0.20 |
| | | ಬೀದರ್ | 0.10 |
| | | ಯಾದಗಿರ | 0.05 |
| 13 | ಹಾಸನ | ಹಾಸನ | 0.25 |
| | | ಚಿಕ್ಕಮಗಳೂರು | 0.25 |
| | | ಕೊಡಗು | 0.05 |
| 14 | ಬಳ್ಳಾರಿ | ಬಳ್ಳಾರಿ | 0.30 |
| | | ರಾಯಚೂರು | 0.20 |
| | | ಕೊಪ್ಪಳ | 0.10 |
| | | ಒಟ್ಟು | 8.84 |

02/04/2020
(ಟಿ. ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ.
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಅನುಬಂಧ-2
ಬಿಬಿಎಂಪಿ ವ್ಯಾಪ್ತಿಗೆ ಸಂಬಂಧಿಸಿದಂತೆ ಹಾಲಿನ ವಿತರಣಾ ವ್ಯವಸ್ಥೆ
ಮತ್ತು ಉಸ್ತುವಾರಿಗೆ ಸಮಿತಿ ರಚನೆ

| ಕ್ರ.ಸಂ. | ಅಧಿಕಾರಿಗಳು | |
|---|---|---|
| 1 | ಶ್ರೀ ಜಿ.ಕುಮಾರ್ ನಾಯಕ್, ಐ.ಎ.ಎಸ್.<br>ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ<br>ಹಾಗೂ ಸಂಯೋಜನಾಧಿಕಾರಿಗಳು, ಆಹಾರ ಮತ್ತು ಇತರೆ ಸರಬರಾಜು ಸಮಿತಿ,<br>ಬಿಬಿಎಂಪಿ, ಕೋವಿಡ್-19 | ಅಧ್ಯಕ್ಷರು |
| 2 | ಕ್ಯಾಪ್ಟನ್ ಪಿ. ಮಣಿವಣ್ಣನ್, ಐ.ಎ.ಎಸ್.<br>ಸರ್ಕಾರದ ಕಾರ್ಯದರ್ಶಿಗಳು<br>ಕಾರ್ಮಿಕ ಇಲಾಖೆ | ಸದಸ್ಯರು |
| 3 | ಶ್ರೀ ಬಿ.ಸಿ.ಸತೀಶ್, ಕೆ.ಸಿ.ಎಸ್.,<br>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳಿ, ಬೆಂಗಳೂರು | ಸಂಯೋಜಕರು |
| 4 | i) ಡಾ: ಬಿ.ವಿ. ಸತ್ಯನಾರಾಯಣ,<br>ನಿರ್ದೇಶಕರು, ಮದರ್ ಡೈರಿ, ಬೆಂಗಳೂರು.<br>ii)ಡಾ: ಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರು,<br>ಬೆಂಗಳೂರು ಸಹಕಾರಿ ಹಾಲು ಒಕ್ಕೂಟ.<br>iii) ಡಾ: ತಿಪ್ಪಾರೆಡ್ಡಿ,<br>ವ್ಯವಸ್ಥಾಪಕ ನಿರ್ದೇಶಕರು, ಕೋಲಾರ ಸಹಕಾರಿ ಹಾಲು ಒಕ್ಕೂಟ.<br>iv) ಡಾ: ಸುಬ್ಬರಾಯ್ ಭಟ್, ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸಹಕಾರಿ ಹಾಲು ಒಕ್ಕೂಟ.<br>V) ಶ್ರೀ ಮಹೇಶ್, ವ್ಯವಸ್ಥಾಪಕ ನಿರ್ದೇಶಕರು, ಮಂಡ್ಯ ಸಹಕಾರಿ ಹಾಲು ಒಕ್ಕೂಟ. | ಸಹ ಸಂಯೋಜಕರು. |

ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಅಧ್ಯಕ್ಷರು ಅಗತ್ಯಕ್ಕೆ ತಕ್ಕಂತೆ ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ಇತರೇ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

02/04/2020
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ.
ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶು ಸಂಗೋಪನೆ)

ಅನುಬಂಧ -3

ಹಾಲಿನ ವಿತರಣಾ ವ್ಯವಸ್ಥೆ

ಮತ್ತು ಉಸ್ತುವಾರಿಗೆ ಜಿಲ್ಲಾ ಮಟ್ಟದ ಸಮಿತಿ

| ಕ್ರ.ಸಂ. | ಅಧಿಕಾರಿಗಳು | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಒಕ್ಕೂಟ | ಸದಸ್ಯರು |
| 4 | ಉಪ ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ | ಸದಸ್ಯರು |
| 5 | ಆಯುಕ್ತರು, ಮಹಾನಗರ ಪಾಲಿಕೆ/ನಗರ ಪಾಲಿಕೆ ಹಾಗೂ ಮುಖ್ಯಾಧಿಕಾರಿ, ಪುರಸಭೆ/ ನಗರಸಭೆ/ ಪಟ್ಟಣ ಪಂಚಾಯತ್ | ಸದಸ್ಯ ಕಾರ್ಯದರ್ಶಿ. |

ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಅಧ್ಯಕ್ಷರು ಅಗತ್ಯಕ್ಕೆ ತಕ್ಕಂತೆ ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ಇತರೇ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಟಿ.ಹನುಮಂತೇಗೌಡ 02/04/2020

(ಟಿ.ಹನುಮಂತೇಗೌಡ)

ಸರ್ಕಾರದ ಅಧೀನ ಕಾರ್ಯದರ್ಶಿ.

ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶು ಸಂಗೋಪನೆ)